ಹೇಳಿರತಕ್ಕಂತಾದ್ದು ರಾಜ್ಯಾಂಗದ ಪ್ರಶ್ನೆ, ಕಾರ್ಯಾಂಗದ ಪ್ರಶ್ನೆ, ಜನಗಳ ಕೆಲಸ ಎಂದು ಹೇಳಿದ್ದಾರೆ. ಅಲ್ಲಿಯ ಭಕ್ತಾದಿಗಳಿಗೆ, ದೇವರಿಗೆ ಯಾವ ರೀತಿಯ ಅಡ್ಡಿ ಆತಂಕ ಆಗದ ರೀತಿಯಲ್ಲಿ ನೋಡಿಕೊಳ್ಳಲಾಗುವುದೆಂದು ಹೇಳಬಯಸುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಸ್ವಾಮಿ, ಅಧಿಕಾರಿಗಳು ಬರೆದಿರತಕ್ಕ ಹೇಳಿಕೆ ಮೇಲೆ ಹೇಳುತ್ತಿದ್ದೀರಿ. ಅಲ್ಲಿ ಕೆಲಸ ನಡೆಯುತ್ತಿದೆ. ಅಲ್ಲಿ ಪೋಲೀಸ್ ಅಧಿಕಾರಿಗಳು ತಡೆಹಿಡಿಯುವ ಕೆಲಸ ಮಾಡ್ತಿಲ್ಲ. ದಯವಿಟ್ಟು ಆ ಕೆಲಸವನ್ನು ತಕ್ಷಣ ನಿಲ್ಲಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಆಯಿತು.

ಶ್ರೀ ಆರ್. ರಾಮಯ್ಯ.—ನಮ್ಮ ದೇಶ ವೈವಿಧ್ಯಮಯ ದೇಶ. ಧರ್ಮಕ್ಕೆ ಚ್ಯುತಿ ಬರಬಾರದು. ಈ ಸಂದರ್ಭದಲ್ಲಿ ಮಾನ್ಯ ಶಾಸಕರಾದ ಲಕ್ಕಪ್ಪನವರು ಕೂಡ ಹೇಳಿರುತ್ತಾರೆ. ಭಕ್ತಾದಿಗಳಿಗೆ ಭಂಗ ಬಂದರೆ ಕಷ್ಟವಾಗುತ್ತದೆ. ಇದನ್ನು ಪ್ರೇರೇಪಿಸುವ ದೃಷ್ಟಿಯಿಂದ ಅಧಿಕಾರಿಗಳು ಮಾಡುತ್ತಿದ್ದಾರೆ. ಎರಡು ಕಿಲೋಮೀಟರ್ ದೂರದಲ್ಲಿ ಕಾರ್ಯಾಚರಣೆ ಆಗಬಾರದು ಎಂದು ಸರ್ಕಾರ ಆಜ್ಞೆ ಕೊಟ್ಟಿರುವುದನ್ನು ಮಂತ್ರಿಯೊಂದು ಸಾರಿ ಯೋಚನೆ ಮಾಡಬೇಕು. ಕಾನೂನು ಪ್ರಕಾರ ೨೦೦ ಮೀಟರು ಸುತ್ತಳತೆಯೊಷ್ಟು ಮಾತ್ರ ಗಣಿ ಗುತ್ತಿಗೆ ಕೆಲಸವನ್ನು ನಿಷೇದಿಸಲು ಅವಕಾಶವಿದೆ ಎಂದು ಹೇಳಿದ್ದಾರೆ. ಅಲ್ಲಿ ಬೋರ್ ಹಾಕಿದರೆ, ಬಾವಿಗಳಲ್ಲಿ ನೀರು ನಿಂತುಹೋಗುತ್ತದೆ. ತುಂಬಾ ಆಳದ ಪ್ರಮಾಣದಲ್ಲಿ ಅಲ್ಲಿ ಕೊರೆಯುವುದರಿಂದ ನೀರು ಬತ್ತಿ ಮರಗಿಡಗಳು ಹಾಗೂ ಅಕ್ಕಪಕ್ಕದ ಹಳ್ಳಿಗಳಲ್ಲಿ ನೀರು ಬತ್ತಿ ಬಹಳ ಅಪಾಯದ ಸೂಚನೆ ಕಂಡುಬರುತ್ತದೆ. ಆದುದರಿಂದ ಅಲ್ಲಿ ಉದ್ಯಮಕ್ಕೆ ಹೆಚ್ಚು ಒತ್ತು ಕೊಡುವುದು ಸರಿಯಲ್ಲ. ಹಾಗೂ ಭಕ್ತಾದಿಗಳ ಚಿಂತನೆಯನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ನಾನಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿದಹಾಗೆ ಅಲ್ಲಿನ ಭಕ್ತಾದಿಗಳ ಬಗ್ಗೆ ಹಾಗೂ ಧರ್ಮದ ಬಗ್ಗೆ ಪರಿಹಾರವನ್ನು ನೋಡಿಕೊಳ್ಳೋಣ. ನಾನು ಈ ಮಾತನ್ನು ಹಗುರವಾಗಿ ಹೇಳುತ್ತೇನೆ ಎಂದಲ್ಲ. ಸರ್ಕಾರ ಈಗ ಕೊಟ್ಟಿರುವ ಸ್ಟೇ ಆರ್ಡರ್ ವೆಕೇಟ್ ಮಾಡುವುದಕ್ಕೆ ಮುಂಚಿತವಾಗಿ ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಕೆ. ವಿ. ರವೀಂದ್ರನಾಥ್.—ಎರಬಾಬ ಕಿಲೋಮೀಟರ್ ದೂರದ ಸರಹದ್ದಿನಲ್ಲಿ ಯಾವುದೇ ಗಣಿ ಕೆಲಸ ಪ್ರಾರಂಭಿಸದಂತೆ ತಡೆಯಾಜ್ಞೆ ಎಂದು ಹೇಳಿರುವುದನ್ನು ಪುನಃ ಪರಿಶೀಲನೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಎಷ್ಟು ಏರಿಯಾ ರಿಸ್ಟ್ರಿಕ್ಟ್ ಮಾಡಬೇಕೋ, ಅಷ್ಟನ್ನು ಮಾಡ ಬೇಕಾಗುತ್ತದೆ.

ಶ್ರೀ ಕೆ. ವಿ. ರವೀಂದ್ರನಾಥಬಾಬು.—ಎರಡನೆಯದನ್ನು ಯೋಚನೆ ಮಾಡಿದ್ದೀರಾ. ಅಲ್ಲಿನ ಅಧಿಕಾರಿಗಳು ಮಾತು ಕೇಳದಿರುವುದನ್ನು ನೋಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಆಯಿತು.

ನಿಯಮ ೩೩೪ರ ಮೇರೆಗೆ

(i) ಕರ್ನಾಟಕ ರಾಜ್ಯದಲ್ಲಿ ಚಿಕ್ಕಮಕ್ಕಳು ಕಾಣೆಯಾಗುತ್ತಿರುವುದರಿಂದ ಜನರಲ್ಲಿ ಆತಂಕ ಉಂಟಾಗಿರುವ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಪ್ರತಿನಿತ್ಯ ಬೆಳಿಗ್ಗೆ ಪ್ರದೇಶ ಸಮಾಚಾರ ಮುಗಿದ ನಂತರ ಆಕಾಶವಾಣಿ ಕೇಂದ್ರದ ಮೂಲಕ ಮಕ್ಕಳು ಕಾಣೆಯಾಗಿದ್ದಾರೆ ಎಂಬ ಪ್ರಕಟಣೆ ರೇಡಿಯೋ ಮುಖಾಂತರ ಪ್ರಕಟಿಸುತ್ತಿದ್ದು, ಈ ಪ್ರಕಟಣೆಯಲ್ಲಿ ವಿಶೇಷವಾಗಿ ಚಿಕ್ಕಮಕ್ಕಳು ಕಾಣೆ ಆಗುತ್ತಿರುವುದು ಈ ರಾಜ್ಯದ ಜನತೆಗೆ ಆತಂಕ ಉಂಟು ಮಾಡಿದೆ. ಈ ಮಕ್ಕಳ ಅಪಹರಣದಲ್ಲಿ ಒಂದು ವ್ಯವಸ್ಥಿತ ಜಾಲವೊಂದು ಮಕ್ಕಳನ್ನು ಅಪಹರಿಸಿ, ದುರುಪಯೋಗ ಮಾಡಿಕೊಳ್ಳುತ್ತಿರಬೇಕೆಂಬ

ಶಂಕೆ ಸಹ ಇದೆ. ಈವರೆಗೆ ಇಂತಹ ಪ್ರಕರಣಗಳಲ್ಲಿ ಕಳೆದುಹೋದ ಮಕ್ಕಳನ್ನು ಹುಡುಕುವುದರ ಬಗ್ಗೆ ಗೃಹ ಇಲಾಖೆಯಲ್ಲಿ ಏನಾದರೂ ಒಂದು ವ್ಯವಸ್ಥಿತವಾದ ಇಂತಹ ಪ್ರಕರಣಗಳನ್ನು ಪತ್ತೆ ಮಾಡಲು ವ್ಯವಸ್ಥೆ ಇದೆಯೇ ? ಕಳೆದ ಒಂದು ವರ್ಷದಲ್ಲಿ ಈ ರೀತಿ ಕಾಣೆ ಆಗಿರುವ ಮಕ್ಕಳ, ಇತರರ ಸಂಖ್ಯೆ ಎಷ್ಟು ? ಪತ್ತೆ ಮಾಡಿರುವ ಸಂಖ್ಯೆಗಳೆಷ್ಟು ? ಎಂಬ ಸಾರ್ವಜನಿಕ ಮಹತ್ವವಾದ ಈ ವಿಷಯದ ಬಗ್ಗೆ ಗೃಹ ಸಚಿವರ ಹೇಳಿಕೆಯನ್ನು ತಿಳಿಯಬಯಸುತ್ತೇನೆ ಹಾಗೂ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು.—ಈ ಬಗ್ಗೆ ನೀವು ಪ್ರಶ್ನೆ ಹಾಕಿದ್ದರೆ, ಕ್ಲಿಯರ್ ಆದ ಉತ್ತರ ಸಿಗುತ್ತಿತ್ತು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗೃಹ ಸಚಿವರ ಪರವಾಗಿ).—ಅಧ್ಯಕ್ಷರೇ ಇಂತಹ ಪ್ರಕರಣಗಳು ಬಂದಾಗ, ಸಂಬಂಧಪಟ್ಟ ಮಾಹಿತಿಯನ್ನು ಪಡೆದುಕೊಂಡು ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಲಕ್ಕ ಒಂದು ವ್ಯವಸ್ಥೆ ಇದೆ. ಈ ವಿಚಾರವನ್ನು ಮಾನ್ಯ ಸಚಿವರಿಗೆ ತಿಳಿಸುತ್ತೇನೆ. ಇನ್ನು ಅಂಕಿಅಂಶಗಳನ್ನು ಕೇಳಿದ್ದಾರೆ, ಅವು ನನ್ನ ಹತ್ತಿರ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದರಲ್ಲಿ ನನ್ನ ಉದ್ದಿಶ್ಯ ಇಷ್ಟೆ...

ಅಧ್ಯಕ್ಷರು.—ಇದು ಬಹಳ ಮಹತ್ವವಾದ ವಿಷಯ. ಇದರ ಬಗ್ಗೆ ಪ್ರಶ್ನೆ ರೂಪದಲ್ಲಿ ಕೇಳಿದರೆ, ಕ್ಲಿಯರ್ ಮಾಹಿತಿ ಸಿಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ಉದ್ದಿಶ್ಯ ಇಷ್ಟೆ, ರಾಜ್ಯದಲ್ಲಿ ಬರುವುದನ್ನು, ಆಗುವುದನ್ನು ನಾವು ಕೇಳುತ್ತಿದ್ದೇವೆ. ಸರ್ಕಾರ ಸೂಕ್ತವಾದ ವ್ಯವಸ್ಥೆ ಮಾಡಿ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಅವರು ತರಿಸಿಕೊಡುತ್ತೇನೆಂದು ಹೇಳಿದ್ದಾರೆ, ಬಿಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ವ್ಯವಸ್ಥೆ ಇದೆ. ಆ ಬಗ್ಗೆ ಅಂಕಿಅಂಶಗಳು ನನ್ನ ಹತ್ತಿರ ಇಲ್ಲ.

೨) ಹಿಂದಂಳಿದ ಹುಡುಗಿಯೊಬ್ಬಳ ಮೇಲೆ ಅತ್ಯಾಚಾರಕ್ಕೆ ಪ್ರಯತ್ನಿಸಿದ ಬಗ್ಗೆ.

ಶ್ರೀ ಪುತಾಪ ಚಂದ್ರಶೆಟ್ಟಿ.—ಕುಂದಾಪುರ ಕ್ಷೇತ್ರದ ಮೊಳಹಳ್ಳಿ ಗ್ರಾಮದಲ್ಲಿ ತಾ: ೧-೮-೮೫ ರಂದು ಸುಮಾರು ೪-೦೦ ಗಂಟೆ ಸಮಯ ರಾಜಕೀಯ ಬೆಂಬಲಿಗ ವ್ಯಕ್ತಿಯೊಬ್ಬರು ಮೋಟಾರು ಬೈಕಿನಲ್ಲಿ ಬಂದು ೫ ಸೆಂಟ್ಸು ಜಾಗದಲ್ಲಿ ವಾಸವಾಗಿರತಕ್ಕಂತಹ ಹಿಂದುಳಿದ ವರ್ಗದ ಬಡ ಕುಟುಂಬದ ಪುಟ್ಟ ಹಾಂಡನ ಮಗಳು ಬಾಬಿ ಹೆಂಗಸಿನ ಮೇಲೆ ಅತ್ಯಾಚಾರಕ್ಕೆ ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಹೆಂಗಸಿನ ಗಲಾಟೆ ಕೇಳಿ ಕತ್ತಿ ಹಿಡಿದು ಓಡಿಬಂದ ಪುಟ್ಟಹಾಂಡನನ್ನು ನೋಡಿ ರಾಜಕೀಯ ಬೆಂಬಲಿಗ ವ್ಯಕ್ತಿಯು ಓಡಿ ಹೋದರು. ಆಗ ಪುಟ್ಟಹಾಂಡನು ಆ ವ್ಯಕ್ತಿಯು ತಂದಂತಹ ಮೋಟಾರು ಸೈಕಲಿನ ಟೈರನ್ನು ಕಡಿದು ಪೋಲೀಸರಿಗೆ ವಿಷಯ ತಿಳಿಸಿದನು. ಇದೂ ಅಲ್ಲದೆ ಪುಟ್ಟಹಾಂಡನು ತನ್ನ ಹಿರಿಯ ಮಗಳನ್ನು ಇದೇ ವ್ಯಕ್ತಿಯು ಬೊಂಬಾಯಿಗೆ ಕೆಲಸಕ್ಕೆಂದು ಹೇಳಿ ಕರೆದುಕೊಂಡು ಹೋಗಿ ವೈಶ್ಯಾವಾಟಿಕೆಗೆ ಕಳುಹಿಸಿರುತ್ತಾನೆಂದೂ, ತಾನು ಕೊಡಬೇಕಾಗಿದ್ದ ಸಾಲಕ್ಕೆ ತನ್ನ ಮಗನನ್ನು ೫ ವರ್ಷಗಳ ಕಾಲ ಜೀತದಾಳನ್ನಾಗಿ ದುಡಿಸಿರುವನೆಂದೂ ಪೋಲೀಸರಿಗೆ ಹೇಳಿಕೆ ಇತ್ತಿರುವನೆಂದೂ ತಿಳಿಸಿರುತ್ತಾನೆ. ಆದರೂ ಪೋಲೀಸರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಆ ವ್ಯಕ್ತಿಯೊಂದಿಗೆ ಚಕ್ಕಂದವಾಡುವುದನ್ನು ನೋಡಿ ಜನರೆಲ್ಲ ಆಶ್ಚರ್ಯಚಕಿತರಾಗಿರುತ್ತಾರೆ. ಪುಟ್ಟಹಾಂಡನು ತನ್ನ ಮಗಳ ಅತ್ಯಾಚಾರಕ್ಕೆ ಪ್ರಯತ್ನಿಸಿದ ವ್ಯಕ್ತಿಯನ್ನು ಶಿಕ್ಷಿಸುವುದಲ್ಲದೆ, ಬೊಂಬಾಯಿಯಲ್ಲಿದ್ದ ತನ್ನ ಹಿರಿಯ ಮಗಳನ್ನು ವಾಪಸ್ಸು ಕರೆಸಿಕೊಡಬೇಕೆಂತಲೂ, ಅಲ್ಲದೆ ಈ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ ನನಗೆ ನ್ಯಾಯ ಒದಗಿಸಿಬೇಕೆಂತಲೂ ಹೇಳಿಕೊಂಡಿರುತ್ತಾನೆ. ಈ ತನಕ ಯಾವುದೇ ಕ್ರಮ ಪೋಲೀಸರು ಕೈಗೊಳ್ಳದಿರುವುದರಿಂದ ನನ್ನ ಕ್ಷೇತ್ರದ ಬಡ ಜನತೆಗೆ ಆದ ಈ ಅನ್ಯಾಯವನ್ನು ಸದನದ ಮೂಲಕ ನಾನು ಸರ್ಕಾರಕ್ಕೆ ತಿಳಿಯಪಡಿಸುತ್ತೇನೆ. ಮತ್ತು ಇದಕ್ಕೆ ನಾನು ಉತ್ತರವನ್ನು ನಿರೀಕ್ಷಿಸುತ್ತೇನೆ. ಇದಕ್ಕೆ ಸರಿಯಾಗಿ ಉತ್ತರ ಕೊಡದೇ ಹೋದ ಪಕ್ಷದಲ್ಲಿ ನಾನು ಇದನ್ನು ಪ್ರಬಲವಾಗಿ ಪ್ರತಿಭಟಿಸುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಮಾನ್ಯ ನಗರಾಡಳಿತ ಸಚಿವರು).—ಇದನ್ನು ಕೇಳುವವರೇ ಸರಿಯಾಗಿ ಸೀರಿಯಸ್ ಆಗಿ ಇಲ್ಲ. ಈಗ ಈ ಸದನದಲ್ಲಿ ಮಾನ್ಯ ಗೃಹ ಮಂತ್ರಿಗಳು ಇಲ್ಲ. ಅವರಿಗೆ ಇದನ್ನು